
# ಪುಸ್ತಕ ಪರಾಗ

## ಪದ್ಮನಾಭ ಭಟ್

### ಒಂದೊಂದು ತಲೆಗೂ ಒಂದೊಂದು ಬೆಲೆ



ಸಮೃದ್ಧವಾದ ಓದಿನ ಖುಷಿಯನ್ನು ಕೊಡುವ ಕೆಲವೇ ಕೆಲವು ಸಮಕಾಲೀನ ಬರಹಗಾರರಲ್ಲಿ ಎಂ.ಆರ್. ದತ್ತಾತ್ರಿ ಕೂಡ ಒಬ್ಬರು. ಅವರ ನಾಲ್ಕನೇ ಕಾದಂಬರಿ ಇದು. ಕಾರ್ಪೊರೆಟ್ ಜಗತ್ತಿನೊಂದಿಗೆ ಹೆಣೆದುಕೊಂಡಿರುವ ಈ ಕಥನ – ಮನುಷ್ಯನ ದ್ವಂದ್ವಗಳು, ಆಸೆಗಳು, ಅದರಿಂದ ಪಡೆದುಕೊಳ್ಳುವ ನೋವುಗಳನ್ನು ಅರಿಯುವ ಹುಡುಕಾಟವನ್ನೇ ಮುಖ್ಯ ಉದ್ದೇಶವಾಗಿರಿಸಿಕೊಂಡಿದೆ.

ಮೊದಲ ಕೆಲವು ಪುಟಗಳು ತುಸು ಒಣಭೂಮಿಯ ನಡಿಗೆಯಂತೆ ಭಾಸವಾದರೂ ನಂತರ ಮಳೆಗಾಲದ 'ಹ್ಯಾಪಿ ಜರ್ನಿ'ಯ ಖುಷಿಯನ್ನು ಮೊಗೆಮೊಗೆದು ಕೊಡುತ್ತದೆ. ಇಲ್ಲಿನ ಎಲ್ಲ ಪಾತ್ರಗಳೂ ಬದುಕಿನ ಬಾಣಲೆಯಲ್ಲಿ ಒಂದಿಲ್ಲೊಂದು ಬಗೆಯಲ್ಲಿ ಬೇಯುತ್ತಿವೆ. ಆ ಪಾತ್ರಗಳನ್ನು ಮಗುಚಿ ಹಾಕುವ ಕೆಲಸವನ್ನು ಶಿವಸ್ವಾಮಿ ಎಂಬ ಮುಖ್ಯಪಾತ್ರ ಮಾಡುತ್ತಿದೆ. ಹಾಗೆ ಮಾಡುವಲ್ಲಿ ಆ ಪಾತ್ರವೂ ಹಲವು ಬಾಣಲೆಗಳ ಕುದಿವೆಣ್ಣೆಯಲ್ಲಿ ಮುಳುಗೇಳುವ ಪಾಡಿಗೆ ಒಳಗಾಗಿದೆ.

ಬದುಕಿನ ಕುರಿತಾದ ತಿಳಿವುಗಳು ಕಾಣ್ಕೆಗಳಾಗಿ ಕಾಣದೆ 'ವ್ಯಾಖ್ಯಾನ'ಗಳಾಗಿ ಕೇಳಿಸುವುದು ಕಾದಂಬರಿಯ ಮಿತಿ. ಒಂದಿಷ್ಟು ಹುಡುಗರು ಹಾವನ್ನು ಕಲ್ಲಿನಲ್ಲಿ ಜಜ್ಜಿ ಕೊಲ್ಲುವ ಸನ್ನಿವೇಶವೊಂದು ಇದರಲ್ಲಿದೆ. ಆ ಸನ್ನಿವೇಶ ಹುಟ್ಟಿಸುವ ತಲ್ಲಣವನ್ನು, ಶಿವಸ್ವಾಮಿ ಬದುಕಿನ ಕುರಿತು ಆಡುವ ಯಾವ ಮಾತೂ ಹುಟ್ಟಿಸುವುದಿಲ್ಲ. ಇಂಥ ಕೆಲವು ಮಿತಿಗಳ ಹೊರತಾಗಿಯೂ ಓದಿನ ಖುಷಿಯನ್ನು ಭರ್ತಿಯಾಗಿ ಕೊಡುವ ಕೃತಿಯಿದು.

**ಒಂದೊಂದು ತಲೆಗೂ ಒಂದೊಂದು ಬೆಲೆ; ಲೇ: ಎಂ.ಆರ್. ದತ್ತಾತ್ರಿ; ಬೆ: ₹250; ಪ್ರ: ಅಂಕಿತ ಪುಸ್ತಕ; ದೂ: 080 26617100**

---

### ಹೋಳಿ



ಮರಾಠಿಯ ಮಹೇಶ್ ಎಲಕುಂಚವಾರ ಅವರು ಕನ್ನಡದ ಸಹೃದಯರಿಗೆ 'ಚಿರೆಬಂಧಿವಾಡ' ನಾಟಕದ ಮೂಲಕ ಪರಿಚಿತರು. ಅವರ ಇನ್ನೊಂದು ಏಕಾಂಕ 'ಹೋಳಿ'ಯನ್ನು ಹೇಮಾ ಪಟ್ಟಣಶೆಟ್ಟಿ ಅವರು ಕನ್ನಡಕ್ಕೆ ತಂದಿದ್ದಾರೆ.

ಬಾಯ್ಸ್ ಹಾಸ್ಟೆಲ್‌ನಲ್ಲಿ ಪಡ್ಡೆ ಹುಡುಗರ ಕಾಡುಹರಟೆಯಂಥ ಸಂಭಾಷಣೆಯಲ್ಲಿ ಶುರುವಾಗುವ ಈ ನಾಟಕ ಬೆಳೆಯುತ್ತ ಬೇರೆ ಬೇರೆ ಆಯಾಮಗಳನ್ನು ಸೇರಿಸಿಕೊಳ್ಳುತ್ತ ಹಿಗ್ಗುತ್ತದೆ. ಧರ್ಮ, ಜಾತಿ, ಸಮುದಾಯ, ಲಿಂಗ, ಸಂಸ್ಕೃತಿ – ಈ ಎಲ್ಲದರ ಬಗೆಗೂ ಸೂಕ್ಷ್ಮವಾಗಿ ಸುಳಿಗಳನ್ನು ಸೃಷ್ಟಿಸುತ್ತ ಹೋಗುವ ಈ ನಾಟಕ, ಯಾವುದನ್ನೂ ಫೋಕಸ್ ಮಾಡುವಷ್ಟು ಒಂದು ಕಡೆ ನಿಲ್ಲುವುದಿಲ್ಲ. ಹೋಳಿ ಹಬ್ಬಕ್ಕೆ ರಜೆ ಕೊಡಬೇಕು ಎಂದು ಆರಂಭವಾಗುವ ಮಾತುಕತೆ ಕೊನೆಗೆ ಪ್ರತಿಭಟನೆ, ಹಿಂಸೆಯ ರೂಪಕ್ಕೆ ತಿರುಗುತ್ತದೆ. ಗುಂಪಿನಲ್ಲಿ ಹುಟ್ಟಿಕೊಳ್ಳುವ ಆಗಂತುಕ ಕ್ರೌರ್ಯ ಒಂದು ಜೀವವನ್ನೇ ಬಲಿತೆಗೆದುಕೊಳ್ಳುವಲ್ಲಿ ನಾಟಕ ಪರ್ಯಾವಸಾನಗೊಳ್ಳುತ್ತದೆ. ಹೇಮಾ ಅವರು ಈ ನಾಟಕವನ್ನು ಧಾರವಾಡ ಸೊಗಡಿನಲ್ಲಿ ಅನುವಾದಿಸಿರುವುದು ಆಪ್ತವಾಗಿದೆ. ಒಂದು ಗುಕ್ಕಿನ ಓದಿಗೂ, ರಂಗದ ಪ್ರದರ್ಶನಕ್ಕೂ ಪರಿಣಾಮಕಾರಿಯಾಗಿಯೇ ಒದಗಿಬರುವ ಏಕಾಂಕವಿದು.

**ಹೋಳಿ; ಮೂಲ: ಮಹೇಶ್ ಎಲಕುಂಚವಾರ; ಅನುವಾದ: ಹೇಮಾ ಪಟ್ಟಣಶೆಟ್ಟಿ; ಬೆ: ₹60 ಪ್ರ: ಅನನ್ಯ ಪ್ರಕಾಶನ. ದೂ: 9448861604**